# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 70/2015**

**ಪಿ.ಡಬ್ಲ್ಯೂ. 1**

**ಸಾಕ್ಷಿಯನ್ನು ಮಧ್ಯಂತ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಪುನಃ ಕರೆಯಿಸಿ ದಿನಾಂಕ 12-03-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
**ಮುಂದುವರೆದ ಪಾಟಿ ಸವಾಲು ಃ- ಶ್ರೀ ಎಸ್.ಎ.ಕೆ ವಕೀಲರಿಂದ**

**1.** ಅಸಲು ದಾವಾ 227/2007 ಮತ್ತು ಆರ್.ಎ 11/2010 ರ ರಾಜಿ ಡಿಕ್ರಿ ಪ್ರಕಾರ ಅವರವರ ಹಿಸ್ಸೆ ವಿಂಗಡಿಸಿ ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ಓ.ಎಸ್ 227/2007 ಮತ್ತು ಆರ್.ಎ 11/2010 ರ ಆಸ್ತಿಗಳು ನನ್ನ ಮಾವ 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಅಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನ್ನ ಮದುವೆ ಮುಂಚೆ ಮತ್ತು ನಂತರವು ಹಿಂದೂಸ್ಥಾನ ಲಿವರನಲ್ಲಿ ಕೆಲಸಕ್ಕೆ ಇದ್ದರು ಅಂದರೆ ಗೊತ್ತಿಲ್ಲ. ಈಗ 4 ನೇ ಪ್ರತಿವಾದಿ ಪಾವರ ಪ್ಲ್ಯಾಂಟ್ ನಲ್ಲಿ ಕೆಲಸಕ್ಕೆ ಇದ್ದಾರೆ ಅನ್ನುವುದು ಗೊತ್ತಿಲ್ಲ. 3 ನೇ ಪ್ರತಿವಾದಿಯು ತನಗೆ ಅಪಘಾತವಾದ ನಂತರ ಚಿಕಿತ್ಸೆಗಾಗಿ ಓ.ಎಸ್ 227/2007 ಮತ್ತು ಆರ್.ಎ 11/2010 ರಾಜಿ ಡಿಕ್ರಿನಲ್ಲಿ ತನ್ನ ಪಾಲಿಗೆ ಬಂದ ಆಸ್ತಿಗಳನ್ನು ಪ್ರತಿವಾದಿ ನಂ. 2 ಮತ್ತು 4 ರವರಿಗೆ ಹಕ್ಕು ಬಿಡುಗಡೆ ಪತ್ರ ಬರೆದು ಬಂದ ಹಣವನ್ನು ಚಿಕಿತ್ಸೆಗಾಗಿ ಉಪಯೋಗಿಸಿಕೊಂಡಿದ್ದಾರೆ ಅನ್ನುವುದು ಗೊತ್ತಿಲ್ಲ.

**2.** ನನ್ನ ಮಾವನ ಆಸ್ತಿಗಳ ಸರ್ವೆ ನಂಬರ ಮತ್ತು ವಿವರಣೆ ಹೇಳುತ್ತೇನೆ. ಸರ್ವೆ ನಂ. 156/1 ನಲ್ಲಿ 8 ಎಕರೆ 19 ಗುಂಟೆ, ಕೆ ನಾಗಾವಿ ಚಿತ್ತಾಪೂರ, ಸರ್ವೆ. ನಂ. 156/2 8 ಎಕರೆ 19 ಗುಂಟೆ ಕೆ ನಾಗಾವಿ ಚಿತ್ತಾಪೂರ, ಸರ್ವೆ. ನಂ. 10, 9 ಎಕರೆ 28 ಗುಂಟೆ ಒಡ್ಲೂಗ್ರಾಮ ರಾಯಚೂರು ಜಿಲ್ಲೆ, ಸರ್ವೆ ನಂ. 37, 6 ಎಕರೆ 39 ಗುಂಟೆ ಕುಕನೂರ ಜಿಲ್ಲಾ ರಾಯಚೂರು, ಸರ್ವೆ ನಂ. 90, 5 ಎಕರೆ 30 ಗುಂಟೆ, ಸಂಕನೂರ ಜಿಲ್ಲಾ ರಾಯಚೂರು, ಪ್ಲಾಟ್ ನಂ. 27 ರಾಘವೇಂದ್ರ ಕಾಲೂನಿ ಶಕ್ತಿನಗರ ಜಿಲ್ಲಾ ರಾಯಚೂರು, ಎರಡು ಹಳೆ ಮನೆಗಳು ಎಗನೂರ ತಾಲ್ಲೂಕಾ ಮತ್ತು ಜಿಲ್ಲೆ ರಾಯಚೂರು. ಪ್ಲಾಟ್ ನಂ. 27 ನನ್ನ ಮದುವೆ ಆದ ಮೇಲೆ ಅದೇ ಮನೆಯಲ್ಲಿ ಇದ್ದೇವು ಅನ್ನುವುದು ಸರಿ. ಆ ಸಮಯದಲ್ಲಿ ನನ್ನ ಅತ್ತೆ ಮಾವ ಎಗನೂರ ಗ್ರಾಮದ ಹಳೆ ಮನೆಯಲ್ಲಿ ಇರುತ್ತಿದ್ದರು ಅಂದರೆ ಸಾಕ್ಷಿಯು ನನ್ನ ಜೊತೆ ಇರುತಿದ್ದರು ಎಂದು ತಿಳಿಸುತ್ತಾರೆ. ಅದೇ ರೀತಿ 4 ನೇ ಪ್ರತಿವಾದಿ ಎಗನೂರ ನಲ್ಲೆ ಇರುತ್ತಿದ್ದ ಅಂದರೆ ಸುಳ್ಳು, ಸಾಕ್ಷಿಯು ನಮ್ಮ ಜೊತೆ ಇರುತ್ತಿದ್ದರು ಎಂದು ಹೇಳುತ್ತಾರೆ. ಚಿತ್ತಾಪೂರ ಗ್ರಾಮದ ಸರ್ವೆ ನಂ. 156/1 ಮತ್ತು 156/2 ಇವುಗಳನ್ನು ರಾಜಿ ಡಿಕ್ರಿ ಆದ ನಂತರ ಪ್ರತ್ಯೇಕ ಖರೀದಿಸಲಾಗಿದೆ ಅಂದರೆ ಸರಿಯಲ್ಲ, ಸಾಕ್ಷಿಯು ಅವು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳುತ್ತಾರೆ. ಈ ಎರಡು ಜಮೀನುಗಳು ನನ್ನ ಅತ್ತೆ ಶಾಮ್ಲಾ ಮತ್ತು ಮೈದುನ ಮಂಜುನಾಥ ಹೆಸರಿನಲ್ಲಿ ಇರುತ್ತವೆ ಅನ್ನುವುದು ಸರಿ.

**ಈ ಹಂತದಲ್ಲಿ ಶ್ರೀ ಎಸ್.ಎ.ಕೆ ವಕೀಲರು ಮುಂದುವರೆದ ಪಾಟಿ ಸವಾಲಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**